# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 274 | Pages. 2 | Date: 19-09-2025, FRIDAY | RNI NO: KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 274 – ಪುಟಗಳು : 2 | 19-09-2025 ಶುಕ್ರವಾರ | Ph: 8762954248 | ದರ : ₹1


# ಹೆತ್ತ ತಾಯಿಯಂತಿದ್ದ ಮಹಿಳೆ ಮೇಲೆ ಅಪ್ರಾಪ್ತನ ಪೈಶಾಚಿಕ ಕೃತ್ಯ

## ಬೆಚ್ಚಿಬಿದ್ದ ಗ್ರಾಮಸ್ಥರು | ಶಾಲೆ ತೊರೆದ ಮಕ್ಕಳು | ಆರೋಪಿ ವಶಕ್ಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ತಂದೆ ತಾಯಿ ಇಲ್ಲದ ತಬ್ಬಲಿ ಮಗು ಎಂದು ಬಾಲ್ಯದಿಂದಲೂ ಹೆತ್ತು ಹೊತ್ತು ಸಾಕಿದ್ದ ಮಗನೇ ಆ ಮಹಾತಾಯಿಯ ಮೇಲೆ ಪೈಶಾಚಿಕ ಕೃತ್ಯ ಎಸಗಿ ಹತ್ಯೆ ಮಾಡಿರುವ ಹೃದಯ ವಿದ್ರಾವಕ ಘಟನೆ ತಾಲ್ಲೂಕಿನ ನೀಲಗಿರಿ ಕಾವಲು ಗ್ರಾಮದಲ್ಲಿ ತಡವಾಗಿ ಬೆಳಕಿಗೆ ಬಂದಿದೆ.

ಜಾವಗಲ್ ಹೋಬಳಿ ನೀಲಗಿರಿ ಕಾವಲು ಗ್ರಾಮದ ಮೀನಾಕ್ಷಮ್ಮ (43) ಮೃತರು. ಆರೋಪಿ ಅಪ್ರಪ್ತಾನಾಗಿದ್ದು ಬಾಲಾಪರಾಧಿಗಳ ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ.



ಗ್ರಾಮವೊಂದರ ನಾರಾಯಣ ಎಂಬುವರ ಪಕ್ಕದ ಮನೆಗೆಲಸ ಮಾಡಿಕೊಂಡಿದ್ದ ಸಮೀಪ ಊರಿನ ಮೀನಾಕ್ಷಮ್ಮ ಬಾಲ್ಯದಿಂದಲೂ ಅನಾಥ ಮಗುವಿನ ಆರೈಕೆ ಮಾಡಿಕೊಂಡಿದ್ದಳು. ಆರೋಪಿ ಜಾವಗಲ್‌ನ ಕಾಲೇಜೊಂದರಲ್ಲಿ ಪಿಯುಸಿ ಓದುತ್ತಿದ್ದ. ಆದರೆ ಸಾಕಿ ಸಲುಹಿದ ತಾಯಿಯ ಮೇಲೆ ಪೈಶಾಚಿಕ ಕೃತ್ಯ ಎಸಗಿರುವುದು ದಿಗ್ಭ್ರಮೆ ಮೂಡಿಸಿದೆ. ಕೌಟುಂಬಿಕ ಕಲಹದಿಂದ ಗಂಡನಿಂದ ದೂರವಿದ್ದ ಮೀನಾಕ್ಷಮ್ಮ ಹೆತ್ತ ಮಗ ಹಾಗು ಸೊಸೆಯೊಂದಿಗೆ ವಾಸವಿದ್ದರು. ಸೊಸೆ ಇತ್ತೀಚೆಗಷ್ಟೇ ಹೆರಿಗೆಗೆಂದು ತವರು ಮನೆಗೆ ತೆರಳಿದ್ದರು. ಮಗ ದಿನೇಶ್ ಅರಸೀಕೆರೆಯ ಬಾರ್‌ವೊಂದರಲ್ಲಿ ಕೆಲಸ ಮಾಡಿಕೊಂಡಿದ್ದಾನೆ.

### ಏನಾಯ್ತು ಆ ದಿನ

ಸೆ. 15ರ ಸೋಮವಾರ ಬೆಳಿಗ್ಗೆ 9ರ ಸಮಯದಲ್ಲಿ ಅಲ್ಲಿಗೆ ಕಾಲ್ನಡಿಗೆಯಲ್ಲಿ ತೆರಳುತ್ತಿದ್ದರು. ನಿರ್ಜನ ಪ್ರದೇಶದಲ್ಲಿ ಹೋಗುತ್ತಿದ್ದಾಗ ದಿಢೀರನೆ ಎದುರಾದ




ಅಪ್ರಾಪ್ತ ಬಾಲಕ ಬಲವಂತವಾಗಿ ಪಕ್ಕದ ಶೆಡ್‌ಗೆ ಎಳೆದೊಯ್ದು ಅತ್ಯಾಚಾರ ಎಸಗಿದ್ದಾನೆ. ನಂತರ ಈ ವಿಚಾರ ಯಾರಿಗಾದರೂ ಗೊತ್ತಾದರೆ ತಾಯಿ ಸ್ಥಾನದಲ್ಲಿರುವ ಮಹಿಳೆ ಮೇಲೆ ಅತ್ಯಾಚಾರ ಎಸಗಿದ ಕೃತ್ಯ ಗೊತ್ತಾಗಿ ಸಮಸ್ಯೆಯಾಗುತ್ತದೆಯೆಂದು ಕಲ್ಲಿನಿಂದ ಮೀನಾಕ್ಷಮ್ಮ ಅವರ ಎದೆ ಹಾಗೂ ತಲೆಗೆ ಹೊಡೆದಿದ್ದಾನೆ. ನಂತರ ದೊಣ್ಣೆಯಿಂದ ಹೊಡೆದಿದ್ದಾನೆ. ಆತನಿಂದ ತಪ್ಪಿಸಿಕೊಳ್ಳಲು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗದೆ ಮೀನಾಕ್ಷಮ್ಮ ನರಳುತ್ತಾ ಪ್ರಾಣ ಬಿಟ್ಟಿದ್ದಾರೆ. ನಂತರ ಶವವನ್ನು ಗ್ರಾಮದ ಪವನ್ ಎಂಬುವರ ಹುಣಸೆಮರದ ಕೆಳಗೆ ಎಸೆದು ಅಲ್ಲಿಂದ ನಾಪತ್ತೆಯಾಗಿದ್ದಾನೆ. ಆರೋಪಿಯು ಮೀನಾಕ್ಷಮ್ಮ ಅವರ ಬಳಿಯಿದ್ದ ಮೊಬೈಲ್ ಅನ್ನು ತೆಗೆದುಕೊಂಡು ಹೋಗಿರುವುದು ತನಿಖೆಯಲ್ಲಿ ಗೊತ್ತಾಗಿದೆ.

### ಅಂತ್ಯಕ್ರಿಯೆಗೆ ಹಾಜರಾಗಿದ್ದ ಅಪ್ರಾಪ್ತ

ಸೆ. 16 ರಂದು ಮೀನಾಕ್ಷಮ್ಮ ಅವರ ಅಂತ್ಯಕ್ರಿಯೆ ನಡೆಯುವ ಜಾಗಕ್ಕೆ ಆರೋಪಿಯು ಬಂದಿದ್ದ. ಆಗ ಆತನ ನಡವಳಿಕೆ ಮೇಲೆ ಸಂಶಯ ವ್ಯಕ್ತಪಡಿಸಿದ

### ಕಾಲೇಜಿಗೆ ಹೋಗಲು ಭಯವೆಂದ ಮಕ್ಕಳು

ಘಟನೆಯಿಂದ ಬೆಚ್ಚಿಬಿದ್ದಿರುವ ನೀಲಗಿರಿ ಕಾವಲು ಗ್ರಾಮದ ಸುಮಾರು 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಾಲೆ ಕಾಲೇಜಿಗೆ ಹೋಗುವುದನ್ನು ಬಿಟ್ಟಿದ್ದಾರೆ. ಬಸ್ ಹತ್ತಲು ಆ ಮಕ್ಕಳು ನಿತ್ಯ ಮೂರು ಕಿ.ಮೀ. ಕಾಲ್ನಡಿಗೆಯಲ್ಲಿ ಹೋಗಬೇಕು. ಘಟನೆಯೂ ಅದೇ ರಸ್ತೆಯಲ್ಲಿ ನಡೆದಿರುವುದರಿಂದ ಭಯದ ವಾತಾವರಣ ನಿರ್ಮಾಣವಾಗಿದೆ. ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಈ ಹಿಂದೆಯೂ ಶಾಲಾ-ಕಾಲೇಜಿಗೆ ಹೋಗುತ್ತಿದ್ದ ಹೆಣ್ಣುಮಕ್ಕಳನ್ನು ಚುಡಾಯಿಸುತ್ತಿದ್ದ ಎಂದು ಗ್ರಾಮಸ್ಥರು ಕಿಡಿಕಾರಿದ್ದಾರೆ.



ಗ್ರಾಮದ ಪವನ್ ಮೃತರ ಪುತ್ರ ದಿನೇಶ್‌ಗೆ ಹೇಳಿದ್ದರು. ಸೋಮವಾರ ಬೆಳಿಗ್ಗೆ ದಾರಿಯಲ್ಲಿ ಮೀನಾಕ್ಷಮ್ಮ ಹಾಗು ಅಪ್ರಾಪ್ತ ಜಗಳವಾಡುತ್ತಿರುವುದನ್ನು ನಾನು ನೋಡಿದ್ದೇನೆಂದು ತಿಳಿಸಿದ್ದರು. ಕೊಲೆಯ ಹಿಂದೆ ಅಪ್ರಾಪ್ತನ ಕೈವಾಡ ಇರುವುದಾಗಿ ದಿನೇಶ್ ಸಾವಿನ ತನಿಖೆ ನಡೆಸುವಂತೆ ದೂರು ನೀಡಿದ್ದರು. ಅದನ್ನು ಆಧರಿಸಿ ಜಾವಗಲ್ ಠಾಣೆ ಪೊಲೀಸರು ಅಪ್ರಾಪ್ತನನ್ನು ಬಂಧಿಸಿದ್ದರು.

# ಹುಲ್ಕೋಡಿನಲ್ಲಿ ಕಾಡಾನೆಗಳ ಹಿಂಡು: ಆತಂಕ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರೇಹಳ್ಳಿ: ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿ ಅನುಘಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹುಲ್ಕೋಡಿನಲ್ಲಿ ಕಾಡಾನೆಗಳ ಹಿಂಡು ಬೀಡು ಬಿಟ್ಟಿದ್ದು ಬೆಳೆಗಾರರು ಆತಂಕದಲ್ಲೇ ದಿನ ದೂಡುವಂತಾಗಿದೆ. ಕಾಡಾನೆಗಳನ್ನು ಓಡಿಸಿದರೂ ಸಹ ಪದೇ ಪದೇ ತೋಟಗಳಲ್ಲಿ ಕಾಣಿಸಿಕೊಳ್ಳುತ್ತಿರುವುದರಿಂದ ಬೆಳೆಗಾರರು ಬೇಸತ್ತು ಹೋಗಿದ್ದಾರೆ.

ಹುಲ್ಕೋಡು ಗ್ರಾಮದ ಕಾಫಿ ತೋಟದ ಮಾಲೀಕ ಹಸೇನ್ ಮಾತನಾಡಿ, 15-20 ಆನೆಗಳು ನಮ್ಮ ತೋಟದಲ್ಲಿ ಕಂಡುಬಂದಿದ್ದು ಅಪಾರ ಪ್ರಮಾಣದ ಬೆಳೆ ನಷ್ಟ ಮಾಡಿವೆ. ಫಸಲಿಗೆ ಬಂದಿರುವ ಮೆಣಸು, ಕಾಫಿ, ಅಡಿಕೆ, ತೆಂಗು ಬೆಳೆ ನಾಶವಾಗಿದೆ. ಬೆಳೆ ನಷ್ಟಕ್ಕೆ ಅಲ್ಪ ಸ್ವಲ್ಪ ಪರಿಹಾರ ನೀಡುವುದರ ಮೂಲಕ ಅರಣ್ಯ ಇಲಾಖೆ ಕೈತೊಳೆದುಕೊಳ್ಳುತ್ತದೆ. ಆದರೆ ಒಂದು ಗಿಡ ಫಸಲಿಗೆ ಬರಬೇಕಾದರೆ ಹತ್ತಾರು ವರ್ಷಗಳು ನಿರಂತರ ಕಷ್ಟಬೇಕಾಗಿದೆ. ಕಾಡಾನೆಗಳ ಹಿಂಡಿನಿಂದ 5 ಎಕರೆಯಷ್ಟು ಬೆಳೆ ಸಂಪೂರ್ಣ ಹಾಳಾಗಿದೆ. ಅಂದಾಜು 40 ವರ್ಷಗಳಷ್ಟು ಹಳೆಯದಾದ ಕಾಫಿ ಗಿಡಗಳನ್ನು ಕಾಡಾನೆಗಳು ಮುರಿದುಹಾಕಿದೆ. ಕಾಡಾನೆಗಳಿಗೆ ಹೆದರಿ ಕೂಲಿ ಕಾರ್ಮಿಕರು ತೋಟಗಳಿಗೆ ಬರಲು ಭಯಪಡುತ್ತಿದ್ದಾರೆ. ಆದ್ದರಿಂದ ಕಾಡಾನೆಗಳನ್ನು ಶಾಶ್ವತವಾಗಿ ಸ್ಥಳಾಂತರ ಮಾಡಬೇಕೆಂದು ಆಗ್ರಹಿಸಿದರು. ಗ್ರಾಮಸ್ಥರಾದ ರಿಚರ್ಡ್, ಬಾಬಣ್ಣ ಇತರರಿದ್ದರು.

# ಸಾವಯವ ಕೃಷಿಯಿಂದ ಆರೋಗ್ಯಕರ ಬೆಳೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಸಾವಯವ ಕೃಷಿ ಪದ್ಧತಿಯಲ್ಲಿ ರಾಸಾಯನಿಕ ಮುಕ್ತ ಆರೋಗ್ಯಕರ ಆಹಾರ ಬೆಳೆಯಬಹುದು ಎಂದು ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ರಾಘವೇಂದ್ರ ಹೇಳಿದರು. ತಾಲ್ಲೂಕಿನ ಹಿರೀಸಾವೆ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಏರ್ಪಡಿಸಿದ್ದ ಪರಿಸರ, ಜಾಗೃತಿ ಮತ್ತು ಮಾಹಿತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.


ಈ ಕೃಷಿ ಪದ್ಧತಿಯಿಂದ ಮಣ್ಣಿನ ಫಲವತ್ತತೆ ಹೆಚ್ಚುತ್ತದೆ. ಪರಿಸರದ ಮೇಲೆ ಕೆಟ್ಟ ಪರಿಣಾಮ ಬೀರುವುದಿಲ್ಲ ಎಂದರು.

ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಪರಿಸರದ ಬಗ್ಗೆ ಪ್ರಬಂಧ, ಚಿತ್ರಕಲೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಜಯಮ್ಮ, ಕೃಷಿ ಮೇಲ್ವಿಚಾರಕ ಮಹದೇವ್ ಪ್ರಸಾದ್ ಬಹುಮಾನ ನೀಡಿದರು. ಕಾಲೇಜು ಆವರಣದಲ್ಲಿ ಗಿಡಗಳನ್ನು ನೆಡಲಾಯಿತು. ಉಪನ್ಯಾಸಕಿ ನೇತ್ರಾವತಿ ಅಧ್ಯಕ್ಷತೆ ವಹಿಸಿದ್ದರು. ವಲಯ ಮೇಲ್ವಿಚಾರಕ ಸುಜಿತ್, ಸೇವಾಪ್ರತಿನಿಧಿಗಳಾದ ಭಾಗ್ಯ, ಶಾಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಷೇರುದಾರರು ಬ್ಯಾಂಕ್ ಜೊತೆ ನಿಕಟ ಸಂಪರ್ಕ ಹೊಂದಬೇಕು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ನಷ್ಟದಲ್ಲಿರುವ ಪಿಕಾರ್ಡ್ ಬ್ಯಾಂಕ್ ಲಾಭದ ಹಾದಿಗೆ ಮರಳುತ್ತಿದೆ ಎಂದು ತಾಲ್ಲೂಕು ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷ ವೈ.ಪಿ. ರಾಜೇಗೌಡ ಹೇಳಿದರು. ಪಟ್ಟಣದ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿ, ಸುಮಾರು 7 ಕೋಟಿ ರೂ. ನಷ್ಟದಲ್ಲಿದ್ದ ಬ್ಯಾಂಕ್ ಇದೀಗ ಬ್ಯಾಂಕ್‌ನ ಹಿಂದಿನ ಅಧ್ಯಕ್ಷರು ಹಾಗೂ ನಿರ್ದೇಶಕರು ಮತ್ತು ಇಂದಿನ ನಿರ್ದೇಶಕರ ಶ್ರಮದಿಂದ ನಷ್ಟದ ಪ್ರಮಾಣ ಸಂಪೂರ್ಣವಾಗಿ ತಗ್ಗಿದ್ದು ಕೇವಲ 39 ಲಕ್ಷ ರೂ. ಮಾತ್ರ ನಷದಲ್ಲಿದೆ. ಇದನ್ನು ಸಹ ಮುಂದಿನ ದಿನಗಳಲ್ಲಿ ಸರಿತೂಗಿಸಿ ಲಾಭದ ಹಾದಿಗೆ ತರಲಾಗುವುದು. ಈ ಬ್ಯಾಂಕಿನಲ್ಲಿ 5,046 ಷೇರುದಾರರಿದ್ದು ಕೆಲವು



ವರ್ಷಗಳಿಂದ ಬ್ಯಾಂಕ್ ನಷ್ಟದಲಿದ್ದ ಕಾರಣ ಸಾಲವನ್ನು ಕೊಡುತ್ತಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಬ್ಯಾಂಕ್ ಲಾಭದತ್ತ ದಾಪುಗಾಲು ಇಡುತ್ತಿರುವುದರಿಂದ ಇವತ್ತು ಐದು ಜನರಿಗೆ ಸಾಂಕೇತಿಕವಾಗಿ ಸಾಲ ದೃಢೀಕರಣ ಪತ್ರವನ್ನು ಕೊಡುವ ಮೂಲಕ ಮತ್ತೆ ಸಾಲ ಕೊಡುವುದಕ್ಕೆ ಮರು ಚಾಲನೆ ನೀಡಲಾಗಿದೆ.

ಅಲ್ಲದೆ ಮುಂದಿನ ದಿನಗಳಲ್ಲಿ ಷೇರುದಾರರಿಗೂ ಲಾಭ ಕೊಡಲಾಗುತ್ತದೆ. ಬ್ಯಾಂಕಿನಿಂದ ಹಣ ತೆಗೆದುಕೊಂಡು ಅಕಾಲಿಕ ಮರಣ ಹೊಂದಿದವರಿಂದ ಸಾಲ ವಸೂಲಿ ಕಷ್ಟದ ಕೆಲಸವಾಗಿರುವುದರಿಂದ ಅಕ್ಟೋಬರ್ ನಿಂದ ಇನ್ಶೂರೆನ್ಸ್ ಮಾಡಿಕೊಡುವ ಯೋಜನೆಯನ್ನು ಬ್ಯಾಂಕ್ ವತಿಯಿಂದ ಜಾರಿ ಮಾಡಲಾಗುವುದು ಎಂದು ಭರವಸೆ ನೀಡಿದರು. ಯಶಸ್ವಿನಿ ಯೋಜನೆ ವಿಸ್ತರಣೆ:

850 ಜನರಿಗಿದ್ದ ಯಶಸ್ವಿನಿ ಕಾರ್ಡ್ ಯೋಜನೆಯನ್ನು ಮುಂದಿನ ದಿನಗಳಲ್ಲಿ 1400 ಜನರಿಗೆ ಒದಗಿಸಲಾಗುವುದು. ಸ್ವಸಹಾಯ ಸಂಘಗಳಿಗೂ ಕೂಡ ಸಾಲವನ್ನು ಕೊಡುವ ಯೋಜನೆಯನ್ನು ಬ್ಯಾಂಕ್‌ನಿಂದ ಜಾರಿಗೆ ತರಲಾಗುವುದು. ಈ ನಿಟ್ಟಿನಲ್ಲಿ ಈಗಾಗಲೇ ಒಂದು ಸ್ವಸಾಯ ಸಂಘಕ್ಕೆ ಸಾಲ ಕೊಡುವ ಮೂಲಕ ಚಾಲನೆ ನೀಡಲಾಗಿದೆ. ಷೇರುದಾರರು ಬ್ಯಾಂಕ್‌ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಿಶ್ಚಿತ ಠೇವಣಿ ಇಟ್ಟರೆ ಬ್ಯಾಂಕ್ ಹೆಚ್ಚು ಲಾಭಗಳಿಸುವುದು ಸಾಧ್ಯವಾಗುವುದು.

ಈಗಾಗಲೇ ಬ್ಯಾಂಕಿನ ಹಣದ ದುರುಪಯೋಗ ಮಾಡಿಕೊಡಿದ್ದ ಎರಡು ಜನರಿಂದ ಕಾನೂನಾತ್ಮಕವಾಗಿ ಹಣವನ್ನು ವಾಪಸು ತೆಗೆದುಕೊಳ್ಳುವ ಕೆಲಸ ಮಾಡಲಾಗಿದೆ.ಮೊದಲ ಬಾರಿ ಬ್ಯಾಂಕ್ ಲಾಭದತ್ತ ಹೆಜ್ಜೆ ಹಾಕುತ್ತಿದ್ದು, ಷೇರುದಾರರು ಬ್ಯಾಂಕ್ ಮೇಲೆ ಇಟ್ಟಿರುವ ಭರವಸೆಗೆ ನಾವೆಲ್ಲಾ ಪ್ರಾಮಾಣಿಕವಾಗಿ ಪಕ್ಷಭೇದ ಮರೆತು ಬ್ಯಾಂಕ್ ಏಳಿಗೆಗೆ ಕೆಲಸ ಮಾಡುತ್ತೇವೆ. ಬ್ಯಾಂಕಿನ್ ಅಭಿವೃದ್ಧಿ ದೃಷ್ಟಿಯಿಂದ ಎಲ್ಲಾ ಷೇರುದಾರರು ಬ್ಯಾಂಕ್ ನೊಂದಿಗೆ ಉತ್ತಮ ವ್ಯವಹಾರವನ್ನು ಇಟ್ಟುಕೊಳ್ಳುವ ಮೂಲಕ ಬ್ಯಾಂಕ್ ಅನ್ನು ಉಳಿಸಿ ಬೆಳೆಸಬೇಕು ಎಂದು ಹೇಳಿದರು.

2024-25ನೇ ಸಾಲಿನ ಆಡಳಿತ ಮಂಡಳಿಯ ವರದಿ ಮಂಡಿಸಲಾಯಿತು. ಹಿಂದಿನ ಸಾಲಿನಲ್ಲಿ 21 ದಿನ ಅಧ್ಯಕ್ಷರಾಗಿ ಉತ್ತಮ ಸೇವೆ ಸಲ್ಲಿಸಿದ ಕೆ.ಪಿ. ಕೃಷ್ಣೇಗೌಡ ಅವರಿಗೆ ಸನ್ಮಾನಿಸಲಾಯಿತು.

ಸಕಲೇಶಪುರ ತಾಲ್ಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಉಪಾಧ್ಯಕ್ಷ ವೀರೇಶ್ ವಳಲಹಳ್ಳಿ, ನಿರ್ದೇಶಕರಾದ ಎ.ಬಿ. ಪ್ರೇಮ್‌ಕುಮಾರ್, ಎಚ್.ಎಚ್ ಉದಯ್, ಲೋಕೇಶ್, ಮನೋಜ್ ಕುಮಾರ್, ವನಿತಾ ಹೆತ್ತೂರು, ಮಂಜುಳ ಮೂಗಲಿ, ಕೆ.ಬಿ. ಜಯರಾಜು ಕಾಮನಹಳ್ಳಿ, ನಾಗರಾಜು ಲಕ್ಕುಂದ, ಬಿ.ಬಿ. ವೇದುನಂದನ್ ಆಚಂಗಿ, ಲೀಲಾವತಿ ಹಾನುಬಾಳು, ಉದಯ ಕುಮಾರ್ ಹೆಗ್ಗದ್ದೆ, ಹಿತೈಷಿ ದೊಡ್ಡನಾಗರ ಹಾಜರಿದ್ದರು.

# ಲಂಚ ಸ್ವೀಕಾರ: ಲೋಕಾ ಬಲೆಗೆ ವಿಎ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಪೌತಿ ಖಾತೆ ಮಾಡಿಕೊಡಲು ರೈತರೊಬ್ಬರಿಂದ 3 ಸಾವಿರ ರೂ. ಲಂಚ ಸ್ವೀಕರಿಸುತ್ತಿದ್ದ ತಾಲ್ಲೂಕಿನ ಹಳ್ಳಿಮೈಸೂರು ನಾಡಕಚೇರಿಯ ಗ್ರಾಮ ಲೆಕ್ಕಾಧಿಕಾರಿಯನ್ನು ಲೋಕಾಯುಕ್ತ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಗ್ರಾಮ ಲೆಕ್ಕಾಧಿಕಾರಿ ರಮೇಶ್ ಬಂಧಿತ ಆರೋಪಿ. ಮುದ್ದೇಗೌಡ ಎಂಬುವವರಿಗೆ ಪೌತಿ ಖಾತೆ ಮಾಡಿಕೊಡಲು 4 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದ. ಸೆ. 16 ರಂದು 1 ಸಾವಿರ ರೂ. ನೀಡಿದ್ದ ಮುದ್ದೇಗೌಡ ಉಳಿದ ಹಣವನ್ನು ಗುರುವಾರ ನೀಡುವುದಾಗಿ ಒಪ್ಪಿದ್ದರು.

ಈ ಸಂಬಂಧ ಮುದ್ದೇಗೌಡ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ನಾಡ ಕಚೇರಿಯಲ್ಲಿ ಬಾಕಿ 3000 ರೂ. ಲಂಚ ಪಡೆಯುತ್ತಿದ್ದಾಗಲೇ ದಾಳಿ ನಡೆಸಿದ್ದಾರೆ.

ಲೋಕಾಯುಕ್ತ ಇನ್ಸ್‌ಪೆಕ್ಟರ್‌ಗಳಾದ ಶಿಲ್ಪಾ, ಚಂದ್ರಶೇಖರ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದ್ದು, ತನಿಖೆ ಮುಂದುವರಿದಿದೆ.

# ಗರ್ಭಿಣಿ, ಬಾಣಂತಿಯರು ಪೌಷ್ಠಿಕ ಆಹಾರ ಸೇವಿಸಲು ಸಲಹೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಗರ್ಭಿಣಿ, ಬಾಣಂತಿ, ಹದಿಹರೆಯದ ಹೆಣ್ಣು ಮಕ್ಕಳು ಪ್ರತಿ ನಿತ್ಯ ಪೌಷ್ಠಿಕ ಆಹಾರಗಳನ್ನು ಸೇವಿಸಬೇಕು. ಸರ್ಕಾರದಿಂದ ಸಿಗುವ ಎಲ್ಲಾ ಸವಲತ್ತುಗಳನ್ನು ಜನಸಾಮನ್ಯರೆಲ್ಲರೂ ಪಡೆದುಕೊಳ್ಳಬೇಕೆಂದು ಹಿರಿಯ ಸಿವಿಲ್ ನ್ಯಾಯಾದೀಶರು ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ದ್ರಾಕ್ಷಾಯಿಣಿ ಬಿ.ಕೆ ಅವರು ತಿಳಿಸಿದ್ದಾರೆ.

ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಬೂವನಹಳ್ಳಿ ವ್ಯಾಪ್ತಿಯ ಹೆಚ್ ಮೈಲಹಳ್ಳಿಲ್ಲಿಂದು ಏರ್ಪಡಿಸಲಾಗಿದ್ದ ಪೋಷಣ್ ಮಾಸಾಚಾರಣೆ ಹಾಗೂ ಪೌಷ್ಠಿಕ



ಆಂದೋಲನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಅಪೌಷ್ಠಿಕತೆಯ ಬಗ್ಗೆ ಗರ್ಭಿಣಿ, ಬಾಣಂತಿ, ಹದಿಹರೆಯದ ಹೆಣ್ಣು ಮಕ್ಕಳಿಗೆ ಕಾನೂನು ಅರಿವುಗಳ ಬಗ್ಗೆ ತಿಳಿಸಿದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಜ್ಯೋತಿ ಲಕ್ಷ್ಮಿ ಕೆ.ಸಿ ಅವರು ಮಾತನಾಡಿ ಜನಸಾಮಾನ್ಯರು ಉಪಯೋಗಿಸುವ ಆಹಾರದ ಬಗ್ಗೆ, ಸಾವಯವ ಕೃಷಿ ಬಳಸಿ ಬೆಳೆಯುವ ಆಹಾರ ಪದಾರ್ಥ ಹಾಗೂ ಹಣ್ಣು ತರಕಾರಿಗಳನ್ನು ಬಳಸಲು, ಗರ್ಭಿಣಿ ಮಹಿಳೆಯಲ್ಲಿ ಕಾಣಿಸಿಕೊಳ್ಳುವ ರಕ್ತಹೀನತೆ ಹಾಗೂ ಅವರ ಆಹಾರ ಪದ್ದತಿ ಬಗ್ಗೆ ತಿಳಿಸಿದರು.

ಇಲಾಖೆಯಿಂದ ಸಿಗುವ ಪೂರಕ ಪೌಷ್ಠಿಕ ಆಹಾರ, ಮೊಟ್ಟೆ ವಿತರಣೆ ಬಗ್ಗೆ ತಿಳಿಸಿದರು ಹಾಗೂ ಹಿರಿಯ ನಾಗರೀಕರು, ವಿಕಲ ಚೇತನ ಮಕ್ಕಳಿಗೆ ಇಲಾಖೆಯಿಂದ ಸಿಗುವ ಸೌಲಭ್ಯಗಳ ಬಗ್ಗೆ ತಿಳಿಸಿದರು. ಬಾಲ್ಯ ವಿವಾಹ ಮತ್ತು ಪೋಕ್ಸೋ ಕಾಯ್ದೆ, ಬಾಲ ಕಾರ್ಮಿಕರು, ಬಾಲ ನ್ಯಾಯ ಮಂಡಳಿ, ಬಾಲಾಪರಾಧಿ, ಮತ್ತು ಬುದ್ಧಿಮಾಂಧ್ಯ ಮಕ್ಕಳ ಬಗ್ಗೆ ಮಾಹಿತಿ ನೀಡಿದರು

# 4.87 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 4.87 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ಚನ್ನಪಟ್ಟಣದ ಕೆಎಂಎಫ್ ವಸತಿ ಗೃಹದಲ್ಲಿ ನಡೆದಿದೆ.

ನಿವಾಸಿ ಪವಿತ್ರ ಅವರು ಸೆ. 16 ರಂದು ಮನೆಗೆ ಬೀಗ ಹಾಕಿ ಕುಟುಂಬ ಸಮೇತ ತವರೂರಿಗೆ ತೆರಳಿದ್ದರು. ಮಾರನೇ ದಿನ ಬಂದು ನೋಡಿದಾಗ ಮನೆ ಬಾಗಿಲು ಮುರಿದಿರುವುದು ತಿಳಿದಿದೆ. ಮುಂಬಾಗಿಲನ್ನು ಬಲವಾದ ಆಯುಧದಿಂ ಮೀಟಿ ಮುರಿದಿರುವ ಕಳ್ಳರು ದಿವಾನ್ ಕಾಟ್ ಕೆಳಗಡೆ ಕ್ಯಾಬಿನ್‌ನ ಬ್ಯಾಗ್‌ನಲ್ಲಿಟ್ಟಿದ್ದ 14 ಗ್ರಾಂ ತೂಕದ ಚಿನ್ನದ ನೆಕ್ಲೆಸ್, 24 ಗ್ರಾಂ 500 ಮಿಲಿ ಗ್ರಾಂ ತೂಕದ ಚಿನ್ನದ ನೆಕ್ಲೆಸ್, 6 ಗ್ರಾಂ ತೂಕದ ಚಿನ್ನದ ಚೈನ್, 12 ಗ್ರಾಂ ತೂಕದ ಚಿನ್ನದ ಖಡ್ಗ, 20 ಗ್ರಾಂ ತೂಕದ ಚಿನ್ನದ ಬಳೆ, 3 ಗ್ರಾಂ ತೂಕದ ಚಿನ್ನದ ಉಂಗುರ, 10 ಗ್ರಾಂ ತೂಕದ ಚಿನ್ನದ ಓಲೆ, 2 ಗ್ರಾಂ ತೂಕದ ಚಿನ್ನದ ಉಂಗುರ, 6 ಗ್ರಾಂ ತೂಕದ ಚಿನ್ನದ ಓಲೆ ಕದ್ದಿದ್ದಾರೆ. ಕಳುವಾದ ಚಿನ್ನಾಭರಣಗಳ ಒಟ್ಟು ಮೌಲ್ಯದ 4,87,500 ರೂ. ಬೆಲೆ ಬಾಳುವ ಚಿನ್ನಾಭರಣ ಕಳುವಾಗಿದೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಹಿಮ್ಸ್‌ನಲ್ಲಿ ಮಹಿಳೆಯೊಬ್ಬರು ತ್ರಿವಳಿ ಮಕ್ಕಳಿಗೆ ಜನ್ಮ ನೀಡಿದ್ದಾರೆ. ಪ್ರಸೂತಿ ತಜ್ಞ ವೈದ್ಯೆ ಡಾ. ನ್ಯಾನ್ಸಿ ಪೌಲ್ ಅವರು ಗುರುವಾರ ಬೆಳಿಗ್ಗೆ 11.04, 11.04 ಮತ್ತು 11.05 ನಿಮಿಷಕ್ಕೆ ಮೂರು ಮಕ್ಕಳನ್ನು ಯಶಸ್ವಿಯಾಗಿ ಹೆರಿಗೆ ಮಾಡಿಸಿದ್ದಾರೆ. ಈ ಪೈಕಿ ಒಂದು ಗಂಡು ಮಗು, ಇಬ್ಬರು ಹೆಣ್ಣು ಕೂಸುಗಳಾಗಿವೆ. ತಾಯಿ-ಮಕ್ಕಳು ಆರೋಗ್ಯವಾಗಿದ್ದಾರೆಂದು ವೈದ್ಯರು ತಿಳಿಸಿದ್ದಾರೆ.



# ಗಂಡಸಿ: 7 ಸಿಂಧಿ ಕರುಗಳ ರಕ್ಷಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಕಾನೂನು ಬಾಹಿರವಾಗಿ ಜಾನುವಾರುಗಳನ್ನು ಸಾಗಿಸುತ್ತಿದ್ದ ಒಬ್ಬನನ್ನು ಬಂಧಿಸಿರುವ ಪೊಲೀಸರು 7 ಹಸುವಿನ ಸಿಂದಿ ಕರುಗಳನ್ನು ರಕ್ಷಿಸಿದ್ದಾರೆ.

ರಾಮನಗರ ಜಿಲ್ಲೆ ಚಿಕ್ಕನಹಳ್ಳಿ ಗ್ರಾಮದ ಮಹಮ್ಮದ್ ರಫೀಕ್ ಬಂಧಿತ. ಗಂಡಸಿ ಗ್ರಾಮದ ಅಪ್ಪಯ್ಯ ಹಾಗು ರಾಮಗರ ಜಿಲ್ಲೆ ಲಾಯ ಗ್ರಾಮದ ಅಹಮ್ಮದ್ ಪಾಷ ಎಂಬುವರ ತಪ್ಪಿಸಿಕೊಂಡಿದ್ದಾರೆ.

ತಾಲ್ಲೂಕಿನ ಹುರುಗಿಲವಾಡಿ ಗ್ರಾಮದ ಪ್ರದೀಪ ಎಂಬುವವರ ಮನೆಯ ಸಮೀಪದಲ್ಲಿರುವ ಖಾಲಿ ಜಾಗದಲ್ಲಿ ಸಿಂದಿ ಹಸುವಿನ ಕರುಗಳನ್ನು ಕಟ್ಟಿಹಾಕಿದ್ದ ದುಷ್ಕರ್ಮಿಗಳು ಅವುಗಳ ಹತ್ಯೆ ಉದ್ದೇಶದಿಂದ ವಾಹನದಲ್ಲಿ ಸಾಗಾಟ ಮಾಡುತ್ತಿದ್ದರೆಂಬ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದ್ದರು. ಪೊಲೀಸರು ಭೇಟಿ ನೀಡಿದಾಗಲೇ ಜಾನುವಾರುಗಳನ್ನು ಸ್ಕಾರ್ಪಿಯೋ ಹಾಗೂ ಓಮಿನಿ ವಾಹನಗಳಿಗೆ ತುಂಬುತ್ತಿರುವುದು ಕಂಡಿದೆ. ಪೊಲೀಸರು ಬರುತ್ತಿದ್ದಂತೆ ಇಬ್ಬರೂ ನಾಪತ್ತೆಯಾಗಿದ್ದು ವ್ಯಾಪಾರಿ ಮಹಮ್ಮದ್ ರಫೀಕ್ ಸಿಕ್ಕಿಬಿದ್ದಿದ್ದಾನೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಎಂಟಿಇಎಸ್ ಅಧ್ಯಕ್ಷರ ಕಚೇರಿಗೆ ಬೀಗ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷರು ಯಾರೆಂಬ ಗೊಂದಲ ಇನ್ನೂ ಮುಂದುವರೆದಿದೆ.

ಸಹಕಾರ ಸಂಘಗಳ ಉಪನಿಬಂಧಕರು ಗುರುದೇವ್ ಅಧ್ಯಕ್ಷ, ಕಾರ್ಯದರ್ಶಿಯಾಗಿ ಜಿ.ಟಿ. ಕುಮಾರ್ ಹಾಗು ಖಜಾಂಚಿಯಾಗಿ ಎಸ್.ಜಿ. ಶ್ರೀಧರ್ ಅವರು ಅಧಿಕಾರ ನಡೆಸಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಆದರೆ ವಿರೋಧ ಬಣದವರು ಅದನ್ನು ಪ್ರಶ್ನಿಸಿ ನ್ಯಾಯಾಲಯ ಮೆಟ್ಟಿಲೇರಿರುವುದರಿಂದ ಗೊಂದಲ ಮುಂದುವರಿದಿದೆ. ಸದ್ಯ ಅಧ್ಯಕ್ಷರ ಕೊಠಡಿಗೆ ಪೊಲೀಸರ ಸರ್ಪಗಾವಲು ಹಾಕಲಾಗಿದೆ. ಗುರುವಾರ ಇಡೀ ದಿನ ಆರ್.ಟಿ. ದ್ಯಾವೇಗೌಡ ಬಣದ ಕೆಲವು ನಿರ್ದೇಶಕರು ಹಾಗೂ ಅವರ ಬೆಂಬಲಿಗರು ಆವರಣದಲ್ಲೇ ಮೊಕ್ಕಾಂ ಹೂಡಿದ್ದರು. ಸಂಜೆ 6 ಗಂಟೆ ನಂತರ ಮುಖ್ಯ ಗೇಟ್‌ಗೆ ಬೀಗ ಹಾಕಿದ ಬಳಿಕ ಎಲ್ಲರೂ ತೆರಳಿದರು.

ಆರ್.ಟಿ. ದ್ಯಾವೇಗೌಡ ಬಣದವರು ಜಿಲ್ಲಾ 6ನೇ ಸೆಷನ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರೆ ಅದಕ್ಕೂ ಮೊದಲೇ ಮಾಜಿ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಬಣದವರು ಜಿಲ್ಲಾ ನ್ಯಾಯಾಲಯದ ಜೊತೆಗೆ ಹೈಕೋರ್ಟ್‌ನಲ್ಲೂ ಕೇವಿಯಟ್ ಸಲ್ಲಿಸಿದ್ದಾರೆ.

# ಪ್ರತ್ಯೇಕ ಅಪಘಾತದಲ್ಲಿ ಇಬ್ಬರ ಸಾವು

ಹಾಸನ: ಜಿಲ್ಲೆಯ ವಿವಿಧೆಡೆ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಓಮಿನಿ ಡಿಕ್ಕಿಯಾಗಿ ಪಾದಚಾರಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಹೆಣವನಹಳ್ಳಿ ಗ್ರಾಮದಲ್ಲಿ ನಡೆದಿದೆ. ಕಟ್ಟಾಯ ಹೋಬಳಿ ಚಿಕ್ಕನಾಯಕನಹಳ್ಳಿ ಗ್ರಾಮದ ಸ್ವಾಮಿಗೌಡ (52) ಮೃತರು. ಪದುಮನಹಳ್ಳಿ ಹಿಟ್ಟಿನ ಗಿರಣಿಗೆ ತೆರಳಿದ್ದ ಅವರು ಮನೆಗೆ ವಾಪಾಸ್ಸಾಗುತ್ತಿದ್ದಾಗ ಅರಕಲಗೂಡು ಕಡೆಯಿಂದ ವೇಗವಾಗಿ ಬಂದ ಓಮಿನಿ ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ತಲೆ ಹಾಗು ದೇಹದ ಭಾಗಗಳಿಗೆ ಗಂಭೀರ ಗಾಯಗಳಾಗಿ ಮೃತಪಟ್ಟಿದ್ದಾರೆ. ಗೊರೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಎಕ್ಸ್‌ಎಲ್ ಮೊಪೆಡ್‌ನಿಂದ ಬಿದ್ದು ಸವಾರ ಮೃತಪಟ್ಟಿರುವ ಘಟನೆ ಚನ್ನರಾಯಪಟ್ಟಣ ತಾಲ್ಲೂಕು ಚಿಕ್ಕಬಿಳ್ತಿ ಸಮೀಪ ನಡೆದಿದೆ.

ಚನ್ನರಾಯಪಟ್ಟಣದ ಬಲರಾಮೇಗೌಡ (60) ಮೃತರು. ತಮ್ಮ ಮೊಪೆಡ್ ಬೈಕ್‌ನಲ್ಲಿ ಶ್ರವಣೂರಿಗೆ ತೆರಳುತ್ತಿದ್ದಾಗ ನಿಯಂತ್ರಣ ತಪ್ಪಿ ರಸ್ತೆ ಮೇಲೆ ಬಿದ್ದಿದ್ದಾರೆ. ತೀವ್ರ ರಕ್ತಸ್ರಾವವಾದ ಹಿನ್ನಲೆ ಮೃತಪಟ್ಟಿದ್ದಾರೆ. ಶ್ರವಣಬೆಳಗೊಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕನ್ನಡ ಪೋಸ್ಟ್

E-mail : kannadapostnews@gmail.com facebook.com / ಕನ್ನಡ post



# ಜಿಲ್ಲೆಯ 17,856 ಅನಕ್ಷರಸ್ಥರಿಗೆ ಅಕ್ಷರ ಕಲಿಸುವ ಗುರಿ

## ವಯಸ್ಕರ ಶಿಕ್ಷಣ ಇಲಾಖೆಯಿಂದ ವರ್ಷದ ಯೋಜನೆ | ಜಿಲ್ಲಾ ಸಾಕ್ಷರತಾ ಪ್ರಮಾಣ ಶೇ. 81.05

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಯಸ್ಕರಿಗೆ ಓದು ಓದು ಬರಹ ಕಲಿಸಿ 2027ರ ವೇಳೆಗೆ ಜಿಲ್ಲೆಯನ್ನು ಸಂಪೂರ್ಣ ಸಾಕ್ಷರತಾ ಜಿಲ್ಲೆಯಾಗಿಸುವ ಉದ್ದೇಶದಿಂದ ಮಹತ್ವದ ಯೋಜನೆ ಹಾಕಿಕೊಂಡಿದ್ದು 27 ಗ್ರಾಮ ಪಂಚಾಯಿತಿ ವ್ಯಾಪ್ತಿಯ 17,856 ಅನಕ್ಷರಸ್ಥರಿಗೆ ಅಕ್ಷರ ಹೇಳಿಕೊಡಲು ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ ನಿರ್ಧರಿಸಿದೆ.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ವರದಿ ಆಧರಿಸಿ ಪಂಚಾಯಿತಿಗಳನ್ನು ಆರಿಸಿಕೊಳ್ಳಲಾಗಿದೆ.

ರಾಜ್ಯ ಸರ್ಕಾರ 1 ಸಾವಿರ ಗ್ರಾಮ ಪಂಚಾಯಿತಿಗಳಲ್ಲಿ ಹಾಸನದ 27 ಪಂಚಾಯಿತಿಗಳು ಸೇರಿವೆ. ಗ್ರಾಪಂಗಳ ವಿವರ: ಆಲೂರು ತಾಲ್ಲೂಕು ಮಗ್ಗೆ ಗ್ರಾಮ ಪಂಚಾಯಿತಿಯ 1200 ಜನರು, ಅರಕಲಗೂಡು ತಾಲ್ಲೂಕಿನ ಬಸವಾಪಟ್ಟಣ, ಕೊಣನೂರು, ಹೊಳಲಗೂಡು, ಹೊನ್ನವಳ್ಳಿಯಿಂದ



2956 ಜನರು, ಅರಸೀಕೆರೆ ತಾಲ್ಲೂಕು ಗ್ರಾಪಂಗಳಾದ ಉಂಡಿಗನಾಡಳು ಮುರುಂಡಿ, ಕರಗುಂದ, ದುಮೇನಹಳ್ಳಿಯ 2900, ಬೇಲೂರಿನ ಅರೇಹಳ್ಳಿ, ಕುಶಾವರ, ಬಿಕ್ಕೋಡು, ಲಕ್ಕುಂದ ಗ್ರಾಮ ಪಂಚಾಯಿತಿಯ 2500, ಚನ್ನರಾಯಪಟ್ಟಣ ತಾಲ್ಲೂಕಿನ ಕೆಂಬಾಳು, ಕಾರೆಹಳ್ಳಿ, ತಗಡೂರು ಗ್ರಾಪಂನ 2800, ಹಾಸನದ ಜಾಗರವಳ್ಳಿ, ಮಡೆನೂರು, ಮೊಸಳೆಹೊಸಳ್ಳಿ, ಅಂಕಪುರದ 1500 ಜನರು, ಹೊಳೆನರಸೀಪುರ ತಾಲ್ಲೂಕಿನ ಪಂಚಾಯಿತಿಗಳಾದ ಹಳ್ಳಿಮೈಸೂರು, ಬಿದರಕ್ಕ, ನಿಡುವಣಿಯ 2000 ಜನರು, ಸಕಲೇಶಪುರದ ಮಳಲಿ, ಬ್ಯಾಕರವಳ್ಳಿ, ಐಗೂರು ಹಾಗೂ ಯಸಳೂರಿನ 2000 ಅನಕ್ಷರಸ್ಥರನ್ನು ಯೋಜನೆಯಡಿ ಪರಿಗಣಿಸಲಾಗಿದೆ.

> ಎಲ್ಲರೂ ಶಿಕ್ಷಿತರಾಗಬೇಕೆಂಬ ಉದ್ದೇಶದಿಂದ ಉಲ್ಲಾಸ್ ನವ ಭಾರತ್ ಸಾಕ್ಷರತಾ, ಸಾವಿರ ಗ್ರಾಮ ಪಂಚಾಯಿತಿ ಸಂಪೂರ್ಣ ಸಾಕ್ಷರತಾ, ಮೂಲ ಸಾಕ್ಷರತಾ ಕಾರ್ಯಕ್ರಮ ಹಮಿಕೊಳ್ಳಲಾಗಿದೆ. 2009-10ನೇ ಸಾಲಿನಿಂದ 2024-25ನೇ ಸಾಲಿನ ವರೆಗೆ ಒಟ್ಟು 854446 ಅನಕ್ಷರಸ್ಥರನ್ನು ನವ ಸಾಕ್ಷರರನ್ನಾಗಿ ಮಾಡಲಾಗಿದೆ.
>
> - ಎಂ. ಕಾಂತರಾಜು, ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ

### 173 ಗ್ರಾಪಂ ಸದಸ್ಯರಿಗೆ ಕಲಿಕೆ

ಜಿಲ್ಲೆಯ ಪ್ರಸ್ತುತ ಸಾಕ್ಷರತಾ ಪ್ರಮಾಣ ಶೇ. 81.05 ರಷ್ಟಿದೆ. ಶೇ. 87 ಪುರುಷರು ಹಾಗು ಶೇ. 76 ಮಹಿಳೆಯರು ಅಕ್ಷರ ಬಲ್ಲವರಾಗಿದ್ದಾರೆ. 2024-25ನೇ ಸಾಲಿನಡಿ ಗ್ರಾಮ ಪಂಚಾಯಿತಿ ಅನಕ್ಷರಸ್ಥ ಚುನಾಯಿತ ಪ್ರತಿನಿಧಿಗಳನ್ನು ಸಾಕ್ಷರರನ್ನಾಗಿಸುವ ಸಾಕ್ಷರ ಸನಾನ ಕಾರ್ಯಕ್ರಮದಡಿ 223 ಸದಸ್ಯರನ್ನು ಗುರುತಿಸಲಾಗಿತ್ತು. ಅದರಲ್ಲಿ 173 ಜನಪ್ರತಿನಿಧಿಗಳಿಗೆ ಓದು, ಬರಹ, ಸರಳ ಲೆಕ್ಕಾಚಾರ ಕಲಿಸಲಾಗಿದೆ. ಸಭಾ ನೋಟೀಸ್, ನಡಾವಳಿ ಮತ್ತು ಮಾರ್ಗಸೂಚಿಗಳನ್ನು ಸ್ವತಃ ಓದಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಬೆಳೆಸಿಕೊಂಡಿದ್ದಾರೆ.

898 ಸ್ವಯಂ ಸೇವಕ ಬೋಧಕರು: ಅನಕ್ಷರತೆಯ ಕಳಂಕದಿಂದ ಹೊರಬರಬೇಕೆಂದು ಜಿಲ್ಲಾ ವಯಸ್ಕರ ಶಿಕ್ಷಣ ಅವಿರತ ಶ್ರಮ ವಹಿಸಿದೆ. ಈ ವರ್ಷ 898 ಸ್ವಯಂ ಸೇವಕ ಬೋಧಕರ ನಿಯೋಜನೆ ಮಾಡಿಕೊಳ್ಳಲಾಗಿದೆ. ಗ್ರಾಮದ ಸುಶಿಕ್ಷಿತ ಯುವಕ, ಯುವತಿಯರು ಅಥವಾ ಶಾಲಾ ಶಿಕ್ಷಕರು ಸ್ವಯಂ ಸೇವಕ ಬೋಧಕರಾಗಬಹುದು. ವರ್ಷದಲ್ಲಿ 120 ಗಂಟೆಗಳನ್ನು ಅವರು ಅನಕ್ಷರಸ್ಥರಿಗೆ ಪಾಠ ಹೇಳಿಕೊಡಬೇಕು. ಅವರಿಗೆ ಮಾಸಿಕ 2500 ರೂ. ಗೌರವಧನ ಪಾವತಿಸಲಾಗುತ್ತದೆ. ಕಲಿಕೆಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಸವಿ ಬರಹ ಹಾಗು ಬಾಳಿಗೆ ಬೆಳಕು ಎಂಬ ಎರಡು ಸಚಿತ್ರ ಲೇಖನಗಳ ಪುಸ್ತಕ ನೀಡಲಾಗುತ್ತದೆ. ಜೊತೆಗೆ ಪೆನ್ನು, ನೋಟ್‌ಪುಸ್ತಕಗಳನ್ನು ಇಲಾಖೆಯಿಂದ ಕೊಡಲಾಗಿದೆ.

ಡಿಜಿಟಲ್ ಸಾಕ್ಷರತೆಗೆ ಉತ್ತೇಜನ: ಗ್ರಾಮೀಣ ಭಾಗದ ಬಹುತೇಕ ವಯಸ್ಕರು ಓದು ಬರಹ ಬಾರದಿದ್ದರೂ ಆಂಡ್ರಾಯ್ಡ್ ಮೊಬೈಲ್ ಬಳಕೆ, ಆರ್ಥಿಕ ವ್ಯವಹಾರ, ಸಾಮಾಜಿಕ ಜಾಲತಾಣಗಳ ಬಳಕೆಯನ್ನು ರೂಡಿಯಿಂದ ಕಲಿತಿರುತ್ತಾರೆ. ಆ ಮೂಲಕ ಅವರಿಗೆ ಅಕ್ಷರ ಕಲಿಸಲು ಯೋಜನೆ ಹಾಕಿಕೊಳ್ಳಲಾಗಿದೆ. ಜೊತೆಗೆ ಆಧುನಿಕ ತಂತ್ರಜ್ಞಾನದಿಂದ ಆಗುತ್ತಿರುವ ದುಷ್ಪರಿಣಾಮಗಳನ್ನು ಹೇಳಿಕೊಡಲಾಗುತ್ತಿದೆ. ಸೈಬರ್ ಕ್ರೈಮ್, ಡಿಜಿಟಲ್ ಅರೆಸ್ಟ್ ನಂತಹ ಅಪಾಯಕಾರಿ ಸನ್ನಿವೇಶಗಳಿಂದ ದೂರವಿರುವಂತೆ ಸಂಪನೂಲ ವ್ಯಕ್ತಿಗಳಿಂದ ಅರಿವು ಮೂಡಿಸಲಾಗುತ್ತಿದೆ. ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ ಅಧಿಕಾರಿಗಳು ದಿಡೀರ್ ಭೇಟಿ ಮೂಲಕ ಗ್ರಾಮೀಣ ಭಾಗದಲ್ಲಿ ವಯಸ್ಕರ ಕಲಿಕೆಯ ಪ್ರಗತಿ ಪರಿಶೀಲನೆ ಮಾಡುತ್ತಿದ್ದಾರೆ.

# ಸದೃಢ ಸಮಾಜಕ್ಕೆ ವಿಶ್ವಕರ್ಮರ ಕೊಡುಗೆ ಅಪಾರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಸಮಾಜದಲ್ಲಿ ಎಲ್ಲ ಸ್ತರಗಳಲ್ಲಿ ವಿಶ್ವಕರ್ಮರ ಕೊಡಗೆ ಸಹಕಾರಿಯಾಗಿವೆ ಎಂದು ನಿವೃತ್ತ ಉಪನ್ಯಾಸಕ ಎಚ್.ಎಸ್. ಪ್ರಭುಶಂಕರ್ ತಿಳಿಸಿದರು.

ಪಟ್ಟಣದ ತಾಲ್ಲೂಕು ಕಚೇರಿಯಲ್ಲಿ ಹಮಿಕೊಂಡಿದ್ದ ವಿಶ್ವಕರ್ಮ ಜಯಂತಿಯಲ್ಲಿ ಮಾತನಾಡಿ, ಸೃಷ್ಟಿ ದೇವತೆಯ ಅಮೂರ್ತ ರೂಪವೇ ವಿಶ್ವಕರ್ಮ ದೇವರು. ಸಮಾಜಕ್ಕೆ ಪಂಚ ಕಸುಬುಗಳ ಮೂಲಕ ವಿಶ್ವಕರ್ಮ ಸಮುದಾಯದ ಜನಾಂಗ ಕೊಡಗೆಯಾಗಿದ್ದಾರೆ. ಯಾವುದೇ ಗ್ರಾಮದಲ್ಲಿ ಒಂದೆರಡು ಮನೆಗಳು ವಿಶ್ವಕರ್ಮಿಗಳು ಇಲ್ಲದಿದ್ದರೆ ಆ ಗ್ರಾಮದ ಏಳಿಗೆ ಕಷ್ಟಸಾಧ್ಯವಾಗುತ್ತದೆ. ವಿಶ್ವಕರ್ಮ ಪರಬ್ರಹರು ಇಂಜಿನಿಯರ್ ಇದ್ದಂತೆ. ಮರ, ಲೋಹ, ಶಿಲ್ಪ, ಚಿನ್ನಾಭರಣ ಹಾಗೂ ಕಬ್ಬಿಣ ಸೇರಿದಂತೆ ಪಂಚ ಕಸುಬುಗಳಿಂದ ಜನ ಜೀವನದಲ್ಲಿ ಹಾಸು ಹೊಕ್ಕಾಗಿದ್ದಾರೆ. ಪ್ರಸ್ತುತ ಸಮಾಜದಲ್ಲಿ ಎಲ್ಲಮೂ ಆಧುನೀಕರಣತೆಯ ಪ್ರಭಾವ ಕಸುಬುಗಳ ಪಾತ್ರ ವಿಸ್ತಾರವಾಗಿದೆ. ಆದರೂ ಇತ್ತೀಚೆಗೆ ಕಟ್ಟಿದ ಸೇತುವೆ, ಕಟ್ಟಡಗಳು ಕೆಲವೇ ವರ್ಷದಲ್ಲಿ ಹಾಳಾಗುತ್ತಿವೆ. ಆದರೆ ಸಾಹಸ್ರಾರು ವರ್ಷಗಳ ಹಿಂದೆ ನಿರ್ಮಿಸಿದ ಜಗತ್ಪ್ರಸಿದ್ದ ದೇವಾಲಯಗಳು ಇಂದಿಗೂ ಜನರನ್ನು ಚಕಿತಗೊಳಿಸಿವೆ. ಇದು ಈ ಜನಾಂಗದ ಹೆಗ್ಗಳಿಕೆಗೆ ಪಾತ್ರವಾಗಿವೆ ಎಂದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಕೃಷ್ಣಮೂರ್ತಿ, ವಿಶ್ವಕರ್ಮ ಸಮಾಜದ ತಾಲ್ಲೂಕು ಅಧ್ಯಕ್ಷ ಗಂಗಾಧರಾಚಾರ್, ರೇವಣ್ಣಾಚಾರ್, ಮಲ್ಲೇಶಾಚಾರ್ ಉಪಸ್ಥಿತರಿದ್ದರು.

# ದಲಿತ ಮಹಿಳೆಗೆ ಅವಮಾನ ಯತ್ನಾಳ್ ವಿರುದ್ಧ ಕ್ರಮಕ್ಕೆ ಆಗ್ರಹ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರ ಅಸಂವಿಧಾನಿಕ ಹಾಗೂ ಮಹಿಳಾ, ದಲಿತ ವಿರೋಧಿ ಹೇಳಿಕೆ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಭೀಮ್ ಆರ್ಮಿ ಸಂಘಟನೆಯಿಂದ ಪ್ರತಿಭಟನೆ ನಡೆಸಿದರು.

ಸಂಘಟನೆಯ ಚನ್ನರಾಯಪಟ್ಟಣ ತಾಲ್ಲೂಕು ಅಧ್ಯಕ್ಷ ಹೆಚ್.ಎಸ್. ಮಂಜುನಾಥ್ ಮಾತನಾಡಿ, ದಸರಾ ಉದ್ಘಾಟನೆಯನ್ನು ಮುಸ್ಲಿಂ, ದಲಿತ ಮಹಿಳೆಯರು ಮಾಡುವ ಅರ್ಹತೆ ಇಲ್ಲ. ಕೇವಲ ಸನಾತನ ಧರ್ಮದ ಮಹಿಳೆಯರಷ್ಟೇ ಅರ್ಹರು ಎಂದಿದ್ದಾರೆ. ಈ ಹೇಳಿಕೆ ಮುಸ್ಲಿಂ ಹಾಗೂ ದಲಿತ ಮಹಿಳೆಯರ ಗೌರವಕ್ಕೆ ಧಕ್ಕೆ ತಂದಿದೆ ಹಾಗೂ ಜಾತಿ ಮತ್ತು ಧಾರ್ಮಿಕ ಬೇಧ ಭಾವ ಪ್ರೋತ್ಸಾಹಿಸುತ್ತದೆ. ಇದು ಸಂವಿಧಾನದ ಜಾತ್ಯಾತೀತ ಮತ್ತು ಸಮಾನತೆಯ ತತ್ವಗಳಿಗೆ ವಿರುದ್ಧವಾಗಿದೆ ಎಂದು ದೂರಿದರು. ಎಸ್ಪಿ ಅವರು, ಕೂಡಲೇ ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಮತ್ತು ಮಹಿಳೆಯರ ಗೌರವಕ್ಕೆ ಕುಂದು ತರುವ ಕಾನೂನಿನ ಅಡಿ ಯತ್ನಾಳ್ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಭೀಮ್ ಆರ್ಮಿ ಸಂಘಟನೆ ಜಿಲ್ಲಾಧ್ಯಕ್ಷ ಪ್ರಸನ್ನ, ಕಾರ್ಯಾಧ್ಯಕ್ಷ ದೊರೆರಾಜು, ಪ್ರಧಾನ ಕಾರ್ಯದರ್ಶಿ ವೆಂಕಟೇಶ್, ಚೇತನ್, ಸ್ವಾಮಿ ಜಾಜೂರು, ವಾಸು, ಜಿಲ್ಲಾ ಜಾಗೃತಿ ಸಮಿತಿ ಸದಸ್ಯೆ ಶಿವಮ್ಮ, ಭಾಗ್ಯ ಕಲಿವೀರ್, ಜೈಭೀಮ್ ಬ್ರಿಗೇಡ್ ಜಿಲ್ಲಾಧ್ಯಕ್ಷ ರಾಜೇಶ್, ಮುಬಷೀರ್ ಅಹಮದ್, ಶಜೇಲ್ ಅಹಮದ್ ಇದ್ದರು.

# ಅನ್ನಭಾಗ್ಯ ಯೋಜನೆಯಡಿ ಗುಣಮಟ್ಟದ ರಾಗಿ ವಿತರಿಸಿ

## ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರ ಸೂಚನೆ | ಫಲಾನುಭವಿಗಳ ಹಿತದೃಷ್ಟಿ ಕಾಪಾಡಲು ಸಲಹೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಅನ್ನಭಾಗ್ಯ ಯೋಜನೆಯಡಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ತಾಲ್ಲೂಕಿನ ಫಲಾನುಭವಿಗಳಿಗೆ ಗುಣಮಟ್ಟದ ರಾಗಿಯನ್ನು ನೀಡುತ್ತಿಲ್ಲವೆಂಬ ದೂರು ಕೇಳಿಬಂದಿದ್ದು ಅಧಿಕಾರಿಗಳು ಅದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಲ್.ಪಿ. ಪ್ರಕಾಶ್ ಗೌಡ ಸೂಚಿಸಿದರು.




ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ 17ನೇ ಗ್ಯಾರಂಟಿ ಅನುಷ್ಠಾನ ಸಮಿಯತಿ ಸಭೆಯಲ್ಲಿ ಮಾತನಾಡಿದ ಅವರು, ತಾಲ್ಲೂಕಿನಲ್ಲಿ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಫಲಾನುಭವಿಗಳಿಗೆ ಸಮರ್ಪಕವಗಿ ಜಾರಿಯಾಗುತ್ತಿದ್ದು, ಫಲಾನುಭವಿಗಳಿಗೆ ನೀಡುವ ರಾಗಿ ಕೊಂಡುಕೊಳ್ಳುವ ಸಮಯದಲ್ಲಿ ಗುಣಮಟ್ಟದ ರಾಗಿಯನ್ನು ಕೊಂಡುಕೊಳ್ಳದೆ ಇತ್ತೀಚೆಗೆ ಮಣ್ಣು ಹಾಗೂ ದೂಳಿನಿಂದ ಕೂಡಿರುವುದಾಗಿ ಫಲಾನುಭವಿಗಳು ದೂರು ನೀಡಿದ್ದಾರೆ. ಇನ್ನು ಮುಂದೆ ಆ ರೀತಿ ಆಗದಂತೆ ಎಚ್ಚರ ವಹಿಸಬೇಕು ಎಂದು ನಿರ್ದೇಶನ ನೀಡಿದರು.

ಕೆಎಸ್‌ಆರ್‌ಟಿಸಿ ಬಸ್ ಗಳನ್ನು ರಸ್ತೆಯ ಎಲ್ಲೆಂದರಲ್ಲಿ ಅವೈಜ್ಞಾನಿಕವಾಗಿ ನಿಲ್ಲಿಸುವುದನ್ನು ತಪ್ಪಿಸಬೇಕು. ಪುರುಷ ಮತ್ತು ಮಹಿಳೆಯರ ಶೌಚಾಲಯವನ್ನು ಸ್ವಚ್ಛಗೊಳಿಸಬೇಕು. ಬಸ್ ನಿಲ್ದಾಣದ ಆವರಣದಲ್ಲಿ ಸ್ವಚ್ಛತೆಯನ್ನು ಕಾಪಾಡಬೇಕು. ಸಾರ್ವಜನಿಕ ಸ್ನೇಹಿಯಾಗಿ ಸಿಬ್ಬಂದಿ ಕೆಲಸ ಮಾಡಬೇಕು. ವಿದ್ಯುತ್ ಪೋಲ್ ಅಳವಡಿಸುವ ಸಂದರ್ಭದಲ್ಲಿ ರೈತರಿಗೆ ತೊಂದರೆಯಾಗದಂತೆ ಅಳವಡಿಸುವುದು ಮತ್ತು ಸದರಿ ವಿದ್ಯುತ್ ತಂತಿಗಳ ಮೇಲಿರುವ ಮರ ಮತ್ತು ಕೊಂಬೆಗಳನ್ನು ಗುರುತಿಸಿ ತೊಂದರೆಯಾಗದಂತೆ ಕಡಿದು ಹಾಕಬೇಕು ಎಂದು ತಿಳಿಸಿದರು.

ಗೃಹಲಕ್ಷ್ಮಿ ಯೋಜನೆಯಡಿ ತಾಲ್ಲೂಕಿನಲ್ಲಿ 8,111 ಫಲಾನಭವಿಗಳಿದ್ದು ಸರ್ಕಾರದಿಂದ 15,88,96,000 ರೂ. ಹಣ ಯಾವುದೇ ಕಮೀಷನ್ ಇಲ್ಲದೆ ಮಹಿಳೆಯರ ಕೈಗೆ ಸೇರಿತ್ತಿದ್ದು ಶೇ. 97.94 ರಷ್ಟು ಯಶಸ್ವಿಯಾಗಿದೆ. ತಾಲ್ಲೂಕಿನಲ್ಲಿ 679 ಜಿಎಸ್‌ಟಿ ವ್ಯಾಪ್ತಿಯವರಿದ್ದು ಅವರ ವಿವರವನ್ನು ಪಡೆದುಕೊಂಡಿದ್ದು ಆ ಪೈಕಿ 142 ಜಿಎಸ್ ಟಿದಾರರನ್ನು ಸದರಿ ಗೃಹಲಕ್ಷ್ಮಿ ಯೋಜನೆಯಿಂದ ಹೊರಗಿಡಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಅನ್ನಭಾಗ್ಯ ಯೋಜನೆಯಡಿ ಎ.ಎ.ವೈ ಕಾರ್ಡ್ 3099 ಹಾಗು 71.848 ಬಿ.ಪಿ.ಎಲ್ ಕಾರ್ಡ್ ಹಾಗೂ 6607 ಎ.ಪಿ ಎಲ್ ಕಾರ್ಡ್ ಇದ್ದು ಒಟ್ಟು 82,364 ಜನ ಸದರಿ ಯೋಜನೆಯ ಉಪಯೋಗ ಪಡೆದುಕೊಳ್ಳುತ್ತಿದ್ದು, ಗೃಹಜ್ಯೋತಿ ಯೋಜನೆಯಡಿ ತಾಲ್ಲೂಕಿನಲ್ಲಿ ಒಟ್ಟು 88,103 ಆರ್. ಆರ್.ಸಂಖ್ಯೆ 83,118 ಆರ್.ಆರ್ ಸಂಖ್ಯೆ ನೊಂದಣಿಯಾಗಿದ್ದು ಶೇ. 99.77 ಫಲಾನುಭವಿಗಳಿಗೆ ತಲುಪುತ್ತಿದ್ದು ಮಾಸಿಕ 2,73,000 ರೂ. ಸರ್ಕಾರದಿಂದ ಜಮಾವಣೆಯಾಗಿದೆ ಶಕ್ತಿ ಯೋಜನೆಯಡಿ ಸೆ.1 ರಿಂದ ಸೆ.15 ರ ವರೆಗೆ 4,27,043 ಮಹಿಳಾ ಪ್ರಯಾಣಿಕರು ಬಸ್ ನಲ್ಲಿ ಪ್ರಯಾಣಿಸಿ ದಾಖಲೆಯಾಗಿದ್ದು ಸರ್ಕಾರದಿಂದ 14,21,20,022 ರೂ. ಜಮಾವಣೆಯಾಗಿದೆ. ಯುವನಿಧಿ ಯೋಜನೆಯಡಿ ತಾಲ್ಲೂಕಿನ 587 ಪದವಿದಾರರು 17 ಜನ ಡಿಪ್ಲೋಮಾ ವಿದ್ಯಾರ್ಥಿಗಳಿದ್ದು ತಿಂಗಳಿಗೆ 30,85,500 ರೂ. ಫಲಾನುಭವಿಗಳ ಖಾತೆಗೆ ಜಮೆ ಆಗುತ್ತಿದೆ.

ಗ್ಯಾರಂಟಿ ಯೋಜನೆಗಳು ಜನರಿಗೆ ಸಮರ್ಪಕವಾಗಿ ತಲುಪುತ್ತಿದ್ದು 5 ಯೋಜನೆಗಳ ಅಧಿಕಾರಿಗಳು ಚೆನ್ನಾಗಿ ಕೆಲಸ ನಿರ್ವಹಿಸುತ್ತಿದ್ದಾರೆಂದರು.

ಸಭೆಯಲ್ಲಿ ತಾಲ್ಲೂಕು ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿ.ಹರೀಶ್ ಮಾತನಾಡಿದರು. ಗ್ಯಾರಂಟಿ ಸಮಿತಿಯ ಎಲ್ಲಾ ಸದಸ್ಯರು 5 ಯೋಜನೆಯ ಅಧಿಕಾರಿ ಹಾಗೂ ಆಡಳಿತಾಧಿಕಾರಿಗಳು ಮತ್ತು ಫಲಾನುಭವಿಗಳು ಹಾಜರಿದ್ದರು.

# ಸಮೀಕ್ಷೆಯಲ್ಲಿ ಹಿಂದು ಬ್ರಾಹಣ ಎಂದು ನಮೂದಿಸಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಇದೇ ತಿಂಗಳ 22 ರಿಂದ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಜಾತಿ ಗಣತಿ ಆರಂಭಿಸುತ್ತಿದ್ದು, ವಿಪ್ರ ಬಾಂಧವರು ಧರ್ಮ ಹಿಂದು, ಜಾತಿ ಬ್ರಾಹಣ ಎಂದು ನಮೂದಿಸಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಸಭಾ ಉಪಾಧ್ಯಕ್ಷ ಕೆ.ಪಿ.ಎಸ್. ಪ್ರಮೋದ್ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹಿಂದಿನ ಜಾತಿಗಣತಿ ಸಮೀಕ್ಷೆಗಳಲ್ಲಿ ಕೇವಲ 18 ಲಕ್ಷ ಇದೆ ಎಂದು ನಮೂದಿಸಲಾಗಿದೆ. ರಾಜ್ಯದಲ್ಲಿ ನಮ ಸಮುದಾಯ ಸುಮಾರು 52 ಲಕ್ಷ ಇದೆ. ಎಲ್ಲ ಉಪ ಪಂಗಡದವರೂ ಹಿಂದು ಬ್ರಾಹಣ ಎಂದೇ ದಾಖಲಿಸಿ. ಹಾಗೆಯೇ ಈ ಹಿಂದೆ ಬ್ರಾಹಣ ಸಮುದಾಯಕ್ಕೆ 210 ಕ್ರಮ ಸಂಖ್ಯೆ ನೀಡಿದ್ದರು, ಈಗ 218 ಎನ್ನುತ್ತಿದ್ದಾರೆ. ಈ ರೀತಿಯ ಗೊಂದಲ ಮಾಡಬೇಡಿ ಎಂದರು.ಹಾಗೆಯೇ ಬ್ರಾಹಣ್ ಕ್ರಿಶ್ಚಿಯನ್ ಇತ್ಯಾದಿ ಕಾಲಂಗಳನ್ನು ತೆಗೆಯಿರಿ ಎಂದು ಸರ್ಕಾರವನ್ನು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಬ್ರಾಹಣ ಸಭಾದ ಜಿಲ್ಲಾ ಪ್ರತಿನಿಧಿ ಪಿ.ಎಸ್.ವೆಂಕಟೇಶ್, ಸಂಘಟನಾ ಕಾರ್ಯದರ್ಶಿ ನಾಗರಾಜ್, ಮಾಧ್ವ ಸಂಘದ ವೆಂಕಟೇಶ್, ಶ್ರೀವತ್ಸ ಇದ್ದರು.

# ಪ್ಲಾಸ್ಟಿಕ್ ನಿರ್ಮೂಲನೆಯಲ್ಲಿ ಪ್ರಭಾವ ಬಳಸಿದರೆ ಸಹಿಸುವುದಿಲ್ಲ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪ್ಲಾಸ್ಟಿಕ್ ನಿರ್ಮೂಲನೆ, ಸ್ವಚ್ಛತೆ ಹಾಗೂ ಪರಿಸರಕ್ಕೆ ಹಾನಿ ಮಾಡುವ ವಿಚಾರದಲ್ಲಿ ಮಹಾನಗರ ಪಾಲಿಕೆ ಕ್ರಮ ಕೈಗೊಳ್ಳಲು ಮುಂದಾದಾಗ ಪ್ರಭಾವಿ ವ್ಯಕ್ತಿಗಳು ತಮ ಅಧಿಕಾರ ಚಲಾಯಿಸಲು ಬಂದರೆ ಅಂತಹವರ ಆಡಿಯೋವನ್ನು ಮಾಧ್ಯಮಕ್ಕೆ ನೀಡುವುದಲ್ಲದೆ ಎಲ್ಲೆಡೆ ಪ್ರಚಾರ ಮಾಡುವುದಾಗಿ ಉಪ ಮೇಯರ್ ಹೇಮಾಲತಾ ಮತ್ತು ಪರಿಸರ ಪ್ರಭಾರಿ ಇಂಜಿನಿಯರ್ ಕವಿತಾ ಎಚ್ಚರಿಸಿದರು.

ನಗರದ ಕಸ್ತೂರಬಾ ರಸ್ತೆ, ಕಟ್ಟಿನಕೆರೆ




ಮಾರುಕಟ್ಟೆಯಲ್ಲಿ ಹಮಿಕೊಂಡಿದ್ದ ಸ್ವಚ್ಛತಾ ಹೀ ಸೇವಾ ಅಭಿಯಾನದ ಏಕ ಬಳಕೆ ನಿಷೇಧಿತ ಪ್ಲಾಸ್ಟಿಕ್ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪರಿಸರ ಹಾಳು ಮಾಡುವವರನ್ನು ಸರಿ ದಾರಿಗೆ ತರುವುದು ನಮ ಉದ್ದೇಶ. ಈ ಕರ್ತವ್ಯಕ್ಕೆ ಯಾರೂ ಅಡ್ಡಿ ಪಡಿಸಬೇಡಿ ಎಂದು ಮನವಿ ಮಾಡಿದರು.

ಪ್ಲಾಸ್ಟಿಕ್ ತ್ಯಜಿಸಿ ಬಟ್ಟೆ ಬ್ಯಾಗ್ ಉಪಯೋಗಿಸುವ ಅಭಿಯಾನ ಯಶಸ್ವಿಗೊಳ್ಳುತ್ತದೆ. ಯಾರೂ ಪ್ಲಾಸ್ಟಿಕ್ ಉಪಯೋಗಿಸಬಾರದು. ಅದರಿಂದ ಕಾಯಿಲೆ ಕಾಣಿಸಿಕೊಳ್ಳುತ್ತವೆ ಎಂದು ಎಚ್ಚರಿಸಿದರು. ಪ್ಲಾಸ್ಟಿಕ್ ಸುಟ್ಟರೂ ಅದರ ಹೊಗೆ ಮನುಷ್ಯನ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಎಂದ ಅವರು, ಕಸವನ್ನು ಹಸಿ-ಒಣ ಎಂದು ಬೇರ್ಪಡಿಸಿ ವಿಲೇವಾರಿ ಮಾಡುವ ಮೂಲಕ ನಗರವನ್ನು ಗ್ರೀನ್ ಸಿಟಿ ಮಾಡಲು ಕೈಜೋಡಿಸಿ ಎಂದು ಮನವಿ ಮಾಡಿದರು.

ವ್ಯಾಪಾರಸ್ಥರು ಮತ್ತು ಗ್ರಾಹಕರು ಪ್ಲಾಸ್ಟಿಕ್ ತ್ಯಜಿಸಿ ಬಟ್ಟೆ ಬ್ಯಾಗ್ ಉಪಯೋಗಿಸಬೇಕು. ಇನ್ನು ಮುಂದೆ ಪ್ಲಾಸ್ಟಿಕ್ ಕಂಡು ಬಂದರೆ ದಂಡದ ಜೊತೆಗೆ ಅಂಗಡಿ ವ್ಯಾಪಾರವನ್ನೇ ಬಂದ್ ಮಾಡಲಾಗುವುದು ಎಂದು ಎಚ್ಚರಿಸಿದರು. ಇದೇ ವೇಳೆ ಕಟ್ಟಿನಕೆರೆ ಮಾರುಕಟ್ಟೆ ವ್ಯಾಪಾರಿಗಳಿಗೆ ಬಟ್ಟೆ ಬ್ಯಾಗ್ ನೀಡಿ ಜಾಗೃತಿ ಮೂಡಿಸಿದರು. ನಂತರ ತಪಾಸಣೆ ಮಾಡಿದಾಗ ಅನೇಕ ಅಂಗಡಿಗಳಲ್ಲಿ ಪ್ಲಾಸ್ಟಿಕ್ ಇರುವುದು ಕಂಡು ಬಂದಿತು. ಕೂಡಲೇ ಅದನ್ನು ಸೀಜ್ ಮಾಡಿ, ಮುಂದೆ ಬಳಸಬೇಡಿ ಎಂದರು.

# ಇತಿಹಾಸದಲ್ಲಿ ಈ ದಿನ

## ಸೆಪ್ಟೆಂಬರ್-19

1759: ಕ್ವಿಬೆಕ್ ಸಮರದಲ್ಲಿ ಬ್ರಿಟಿಷರು ಫ್ರೆಂಚರ ಮೇಲೆ ಜಯ ಸಾಧಿಸಿದರು.

1893 ನ್ಯೂಜಿಲ್ಯಾಂಡ್ ವಿಶ್ವದ್ಲೇ ಮೊದಲ ಬಾರಿಗೆ ಮಹಿಳೆಯರಿಗೆ ಮತದಾನ ಹಕ್ಕು ನೀಡಿದ ದೇಶವಾಯಿತು.

1944: ದ್ವಿತೀಯ ಮಹಾಯುದ್ಧದಲ್ಲಿ ಫಿನ್‌ಲ್ಯಾಂಡ್, ಸೋವಿಯತ್ ಒಕ್ಕೂಟದೊಂದಿಗೆ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿತು.

1957: ಅಮೇರಿಕಾದ ನೆವಾಡಾ ಮರುಭೂಮಿಯಲ್ಲಿ ಅಣು ಪರೀಕ್ಷೆ ನಡೆಯಿತು.

1982: ಲೆಬನಾನ್‌ನ ಬೇರುತ್ ನಗರದಲ್ಲಿ ನಡೆದ ಹತ್ಯಾಕಾಂಡದಲ್ಲಿ ನೂರಾರು ಮಂದಿ ಸಾವನ್ನಪ್ಪಿದರು.

2006: ಥೈಲ್ಯಾಂಡ್‌ನಲ್ಲಿ ಸೇನೆಯ ಕದನಕಾಂಡ ನಡೆಯಿತು.

### ಜನನ

1911: ವಿಲಿಯಂ ಗೋಲ್ಡಿಂಗ್, ಇಂಗ್ಲಿಷ್ ಸಾಹಿತಿ ಹಾಗೂ ನೋಬೆಲ್ ಪ್ರಶಸ್ತಿ ಪುರಸ್ಕೃತ

1926: ಡ್ಯೂಕ್ ಸ್ನೈಡರ್, ಅಮೇರಿಕಾದ ಖ್ಯಾತ ಬೇಸ್ ಬಾಲ್ ಆಟಗಾರ

1983: ಕ್ರಿಸ್ಟೋಫರ್ ಟ್ರಾನ್ಸ್ ಫೀಲ್ಡ್, ಆಸ್ಟ್ರೇಲಿಯಾದ ಫುಟ್‌ಬಾಲ್ ಆಟಗಾರ

### ಮರಣ

1881: ಜೇಮ್ಸ್ ಎ. ಗಾರ್ಫೀಲ್ಡ್, ಅಮೇರಿಕದ 20ನೇ ಅಧ್ಯಕ್ಷ

1985: ಇಟಲಿಯ ಚಲನಚಿತ್ರ ನಿರ್ದೇಶಕ ಇಟಾಲೋ ಕ್ಯಾಲ್ವಿನೊ

# ಸಿಐಟಿಯು ರಾಜ್ಯ ಸಮೇಳನ ಲಾಂಛನ ಬಿಡುಗಡೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಾರ್ಮಿಕರ ಹಕ್ಕು, ಜನಸಾಮಾನ್ಯರ ಬದುಕನ್ನು ಹಸನುಗೊಳಿಸುವ ನಿಟ್ಟಿನಲ್ಲಿ ಸಿಐಟಿಯು 16ನೇ ರಾಜ್ಯ ಸಮೇಳನ ನ.13 ರಿಂದ 15ವರೆಗೆ ಮೂರು ದಿನಗಳ ಕಾಲ ನಡೆಯಲಿದೆ. ಈ ಸಂಬಂಧ ನಗರದ ಶ್ರಮ ಕಚೇರಿಯಲ್ಲಿ ಸ್ವಾಗತ ಸಮಿತಿ ಹಮಿಕೊಂಡಿದ್ದ ಸಭೆಯಲ್ಲಿ ಸಮೇಳನದ ಅಧಿಕೃತ ಲಾಂಛನ ಬಿಡುಗಡೆ ಮಾಡಲಾಯಿತು.





ಸಭೆಯಲ್ಲಿ ಮಾತನಾಡಿದ ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಅವರು, ಕಾರ್ಮಿಕ ವರ್ಗದ ಪರಿಸ್ಥಿತಿ ಚಿಂತಾಜನಕವಾಗಿದೆ. ಅದರಲ್ಲೂ ಅಸಂಘಟಿತ ಕಾರ್ಮಿಕರು ಸರಿಯಾದ ಕನಿಷ್ಠ ಕೂಲಿಯಿಲ್ಲದೆ ಬದುಕನ್ನ ನಡೆಸಲಾಗದ ಪರಿಸ್ಥಿತಿಗೆ ತಲುಪುತ್ತಿದ್ದಾರೆ. ಇದಕ್ಕೆ ಕಾರಣವಾಗಿರುವ ನೀತಿಗಳ ಕುರಿತು ಚರ್ಚಿಸಿ ಮುಂದಿನ ಹೋರಾಟಗಳ ದಿಕ್ಕನ್ನು ರೂಪಿಸಲು ಹಾಸನದಲ್ಲಿ ಮೂರು ದಿನಗಳ ಕಾಲ ಕಾರ್ಮಿಕರ ರಾಜ್ಯ ಸಮೇಳನವನ್ನು ನಡೆಸಲಾಗುತ್ತಿದೆ. ಈ ಸಮೇಳನದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ, ಎಲ್ಲಾ ಕಾರ್ಮಿಕ ವಿಭಾಗಗಳಿಂದ ಆಯ್ದ 500ಕ್ಕೂ ಹೆಚ್ಚು ಪ್ರತಿನಿಧಿಗಳಾಗಿ ಕಾರ್ಮಿಕ ನಾಯಕರು ಭಾಗವಹಿಸಲಿದ್ದಾರೆ ಎಂದರು.

ಸ್ವಾಗತ ಸಮಿತಿ ಗೌರವಾಧ್ಯಕ್ಷ ಹೆಚ್.ಎನ್.ಪರಮಶಿವಯ್ಯ ಮಾತನಾಡಿ, ಜಿಲ್ಲೆಯಲ್ಲಿ ಸಿಐಟಿಯು ಎಲ್ಲಾ ವಿಭಾಗದ ಜನರ ಕಷ್ಟಗಳಿಗೂ ಸ್ಪಂದಿಸುತ್ತಿದೆ, ಮಾತ್ರವಲ್ಲ ಹಲವು ನಿರ್ಣಾಯಕ ಹೋರಾಟಗಳನ್ನು ರೂಪಿಸಿ ಜಯಗಳಿಸುವುದರ ಮೂಲಕ ಜನತೆಗೆ ನ್ಯಾಯ ಒದಗಿಸಿದೆ. ಇಂತಹ ಸಂಘಟನೆಯ ಮಹತ್ತರವಾಗ ರಾಜ್ಯ ಸಮೇಳನವನ್ನು ಯಶಸ್ವಿಗೊಳಿಸುವುದು ಜಿಲ್ಲೆಯ ನಾಗರಿಕರ ಕರ್ತವ್ಯ. ಜಿಲ್ಲೆಗೆ ಬಂದ ಅತಿಥಿಗಳನ್ನು ಸತ್ಕರಿಸಿ ಕಳುಹಿಸಲು ಬೇಕಾದ ಸಕಲ ಸಿದ್ದತೆಗೆ ಜಿಲ್ಲೆಯ ಜನತೆ ಉದಾರವಾಗಿ ಸಹಾಯ ಮಾಡಬೇಕೆಂದು ಮನವಿ ಮಾಡಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ.ಪುಷ್ಪ ಮಾತನಾಡಿ, ಜಿಲ್ಲೆಯಲ್ಲಿರುವ ದೊಡ್ಡ ಸಂಖ್ಯೆಯ ರೈತ ಕಾರ್ಮಿಕರು ಈ ಸಮ್ಮೇಳನವನ್ನು ಯಶಸ್ವಿಗೊಳಿಸಲು ಕೈಜೋಡಿಸಬೇಕಿದೆ. ಆ ಮೂಲಕ ರಾಜ್ಯದ ಕಾರ್ಮಿಕ ಚಳುವಳಿಯ ಬೆಳವಣಿಗೆಗೆ ಸಹಕರಿಸಬೇಕೆಂದು ಮನವಿ ಮಾಡಿದರು. ಹಿರಿಯ ಪತ್ರಕರ್ತರಾದ ಆರ್.ಪಿ. ವೆಂಕಟೇಶಮೂರ್ತಿ, ಸ್ವಾಗತ ಸಮಿತಿ ಖಜಾಂಚಿ ಜಿ.ಪಿ.ಸತ್ಯನಾರಾಯಣ, ಹಿರಿಯ ದಲಿತ ನಾಯಕರಾದ ಹುಲಿಕಲ್ ರಾಜಶೇಖರ್, ಸಂವಿಧಾನ ಓದು ಬಳಗದ ರಾಜ್ಯ ನಾಯಕರಾದ ರಾಜು ಗೊರೂರು, ಇರ್ಷಾದ್ ಅಹಮದ್ ದೇಸಾಯಿ, ಮಾದಿಗ ದಂಡೋರ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಆರ್. ವಿಜಯಕುಮಾರ್, ಈರೇಶ್ ಹಿರೇಹಳ್ಳಿ, ಗ್ಯಾರಂಟಿ ರಾಮಣ್ಣ, ಮಂಜುನಾಥ್, ಮಮತಾ ಶಿವು, ಹೆಚ್.ಆರ್.ನವೀನ್ ಕುಮಾರ್, ಪೃಥ್ವಿ ಇದ್ದರು.

# ವಿಶ್ವಕರ್ಮರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಿ: ಸಿಮೆಂಟ್ ಮಂಜು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ವಿಶ್ವಕರ್ಮ ಸಮುದಾಯದವರು ಶ್ರಮಜೀವಿಗಳಾಗಿದ್ದು, ಸಮಾಜಕ್ಕೆ ಅವರ ಕೊಡುಗೆ ಅನನ್ಯವಾದುದು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಮತ್ತು ತಾಲ್ಲೂಕು ವಿಶ್ವಕರ್ಮ ಸಮಾಜದಿಂದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಹಮಿಕೊಂಡಿದ್ದ ವಿಶ್ವಕರ್ಮ ಜಯಂತಿ ಉದ್ಘಾಟಿಸಿ ಮಾತನಾಡಿದರು. ವಿಶ್ವಕರ್ಮ ಸಮಾಜಕ್ಕೆ ತನ್ನದೇ ಆದ ಚಾರಿತ್ರಿಕ ಹಿನ್ನೆಲೆ ಇದೆ. ವೇದಗಳ ಕಾಲದಿಂದಲೂ ಸಮಾಜಕ್ಕೆ ಇವರು ತಮದೇ ಆದ ಕೊಡುಗೆ ನೀಡ್ದಾರೆ. ವಿಶ್ವಕರ್ಮ ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದೆ. ಅನೇಕತೆಯಲ್ಲಿ ಏಕತೆ ಹೊಂದಿರುವುದೇ ನಮ ವೈಶಿಷ್ಟ್ಯವಾಗಿದೆ. ಸಮಾಜದಲ್ಲಿ ಅಭಿವೃದ್ಧಿ ಮತ್ತು ಬದಲಾವಣೆ ಅನಿವಾರ್ಯ. ಆ ನಿಟ್ಟಿನಲ್ಲಿ ಉತ್ತಮ ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸಬೇಕು. ನಿಗಮದಿಂದ ದೊರೆಯುವ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಎಂದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248